

ಮಲೆನಾಡಿನಲ್ಲಿ, ಕೇವಲ ಕೃಷಿಯಿಂದಲೇ ಶ್ರೀಮಂತರಾದವರು ಎಲ್ಲೋ ಸಾವಿರಕ್ಕೊಬ್ಬರು; ಅದೂ ಅವರು ಮುಳುಗಡೆಯ ಸಂತ್ರಸ್ತರಾಗಿ, ಒಮ್ಮೆಲೇ ದೊಡ್ಡ ಪ್ರಮಾಣದ ನಗದನ್ನು ಪಡೆದುಕೊಂಡು, ಹಿಂದೆಯೇ ತೋಟ ಮಾಡಿಕೊಂಡವರಾಗಿದ್ದರೇ ವಿನಃ ಶಾಂತಾರಾಮ ರಾಜಾರಾಮ ಇವರಂತೆ ಇತ್ತೀಚೆಗೆ ಹೊಸದಾಗಿ ತೋಟ ಹಾಕಿದವರಾಗಿರಲಿಲ್ಲ. ನವಿಲೆಸರದಲ್ಲಿ ಇವರು ಮಾಡಿದ ತೋಟವು ಎಲ್ಲದರಂತೆ, ಎರಡು ಗುಡ್ಡಗಳ ನಡುವಿನ ತಂಪಿನಲ್ಲಿ ಹಾಕಿದ್ದಾಗಿರದೆ, ಬಟಾಬಯಲಿನ ಗೊಚ್ಚು ಕಲ್ಲಿನಲ್ಲಿ ಬೆಳೆದುನಿಂತಿತ್ತು. ಸಣ್ಣಪುಟ್ಟ ಗಾಳಿಗೂ ಎತ್ತರದ ಅಡಿಕೆ ಮರಗಳು ಮುರಿದು ಹೋಗುತ್ತಿದ್ದವು; ಹಾಗೆಯೇ ಬೇಸಿಗೆಯಲ್ಲಿ ಒಂದೆರಡು ದಿನ ವಿದ್ಯುತ್ತಿನ ವ್ಯತ್ಯಯವಾದರೂ ಮರಗಳು ಒಣಗಿ ಬಿಡುತ್ತಿದ್ದವು. ಸರ್ಕಾರದವರು ಕೃಷಿಕರಿಗಾಗಿ ಉಚಿತವಾಗಿ ವಿದ್ಯುತ್ ಕೊಡುವ ಮಾತಂತೂ ಪತ್ರಿಕೆಗಳಲ್ಲಿ ರಾರಾಜಿಸುತ್ತಿದ್ದವೇ ಹೊರತು, ಅದು ಹಗಲು ಹೊತ್ತಿನಲ್ಲಿ ಸಿಗದೆ, ರಾತ್ರಿ ಯಾವುದೋ ಅಪರ ವೇಳೆಗೆ ಬರುತಿತ್ತು. ಅತೀ ಕಡಿಮೆ ವೋಲ್ಟೇಜಿನಿಂದಾಗಿ, ಆಳದ ಬಾವಿಯಿಂದ ನೀರನ್ನು ಎತ್ತುವುದು ಪಂಪ್‌ಸೆಟ್ಟಿಗೆ ಕಷ್ಟವಾಗುತ್ತಿತ್ತು. ಇನ್ನು ಕಾಡುಕೋಣ, ಕಾಡು ಹಂದಿಗಳ ಕಾಟವಂತೂ ಇತ್ತೀಚೆಗೆ ಹೆಚ್ಚಾಗಿ, ಎದೆ ಮಟ್ಟ ಬೆಳೆದುನಿಂತ ಸಸಿಗಳೂ ಬಲಿಯಾಗಿಬಿಡುತ್ತಿದ್ದವು. ಕೂಲಿ ಆಳು, ಗೊಬ್ಬರ ಎರಡೂ ದಿನದಿಂದ ದಿನಕ್ಕೆ ದುಬಾರಿಯಾಗುತ್ತಾ, ಸಾಮಾನ್ಯದವರು ಕೃಷಿಯನ್ನು ಕೈಬಿಡುವಂತಾಗಿತ್ತು. ಶಾಂತಾರಾಮನೇನೊ ಬೆಂಗಳೂರಿನಲ್ಲಿ ನೌಕರಿಮಾಡಿಕೊಂಡು, ಊರಿನಲ್ಲಿದ್ದ ಅಣ್ಣನಿಗೆ ಸಾಕಷ್ಟು ಹಣ ಕಳಿಸುತ್ತಿದ್ದ; ಅದಿಲ್ಲವಾದರೆ, ಆಕಾಶದ ಅಡಿಕೆ ಚಂಡೆಗಳು ಯಾವತ್ತೋ ನೆಲಕ್ಕೆ ಬಿದ್ದಿರುತ್ತಿದ್ದವು.

ಹೀಗೆ ಆರಕ್ಕೆ ಏರದೆ, ಮೂರಕ್ಕೆ ಇಳಿಯದೆ ರಾಜಾರಾಮನ ಸಂಸಾರ ರಥ ಹ್ಯಾಗೋ ಸಾಗಿತ್ತು. ಇಂತಹ ದಿನಗಳಲ್ಲಿಯೇ ಅವನಿಗೆ ಸಾಗರದ ಸಮೀಪವಿದ್ದ ಶ್ರೀಮಠದ ಸಂಪರ್ಕ ಹೆಚ್ಚಾಯಿತು. ಈ ಹಿಂದೆ ಅವನು ತನ್ನ ಸೋದರ ಮಾವ ಹಿರಣ್ಯನೊಡನೆ ಮಠಕ್ಕೆ ಹೋಗಿಬರುತ್ತಿದ್ದ; ಅವನು, ತನಗೆ ವಯಸ್ಸಾಗುತ್ತಲೇ ತನ್ನ ತಂಗಿಯ ಮಗ ರಾಜಾರಾಮನನ್ನು ಪ್ರತಿಯೊಂದು ಕೆಲಸಕ್ಕೂ ಮುಂದೆಬಿಡುತ್ತಿದ್ದ. ಈಗ ಅವನು ವಾರದಲ್ಲಿ ಎರಡು ಮೂರು ದಿನವಂತೂ ಅಲ್ಲಿಯೇ ಇದ್ದುಕೊಂಡು ಪಾರು ಪತ್ಯೆಗಾರನಂತೆ ಕೆಲಸ ಮಾಡುತ್ತಾನೆ. ಮಠದ